ಅಹರ್ನಿಶಂ ಜಾಗರಣೀಯಂ ಲೋಕಹಿತಂ ಮಮ ಕರಣೀಯಂ

# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ



ಭಾರತ, ಅಮೇರಿಕಾ ಮತ್ತು ಜಪಾನ್ ನೌಕಾಪಡೆಗಳು ಜಂಟಿಯಾಗಿ ನಡೆಸುತ್ತಿರುವ ಮಲಬಾರ್ ಸಮರಾಭ್ಯಾಸದಲ್ಲಿ ಯುದ್ಧನೌಕೆಯ ಮೇಲೆ ಸನ್ನದ್ಧ ಸ್ಥಿತಿಯಲ್ಲಿರುವ ಭಾರತೀಯ ನೌಕಾಪಡೆಯ ಸೀ ಕಿಂಗ್ ಹೆಲಿಕಾಪ್ಟರ್.

ಸಂಪುಟ : 39 ಸಂಚಿಕೆ : 1 ಹೇಮಲಂಬಿ–ಶ್ರಾವಣ ಕಲಿಯುಗಾಬ್ದ 5119 15–8–2017 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4

**ಹೆಸರು :** ದೇವನಿ, ಡೋಂಗರಿ ಅಥವಾ ಡೋಂಗರಪತ್ತಿ ಎಂದೂ ಕರೆಯಲಾಗುತ್ತದೆ.

**ಮೂಲ :** ಕರ್ನಾಟಕದ ಬಸವಕಲ್ಯಾಣ, ಬೀದರ, ಭಾಲ್ಕಿ, ಮಹಾರಾಷ್ಟ್ರದ ಲಾತೂರ್ ಪ್ರದೇಶ; ಹೈದರಾಬಾದ್ ಪ್ರದೇಶದಲ್ಲೂ ಕಂಡು ಬರುತ್ತದೆ.

**ರೂಪ :** ಮಧ್ಯಮಗಾತ್ರದ ಶರೀರ, ಸುಮಾರಾಗಿ ಗೀರ್ ತಳಿಯನ್ನು ಹೋಲುತ್ತವೆ. ಡಾಂಗಿ, ಗೀರ್ ಮತ್ತು ಸ್ಥಳೀಯ ತಳಿಗಳಿಂದ ಮಿಶ್ರಣದಿಂದ ದೇವನಿ ರೂಪುಗೊಂಡಿದೆ. ಗಿಡ್ಡ ಕೋಡುಗಳ ಈ ತಳಿಯ ದನಗಳು ಸಾಮಾನ್ಯವಾಗಿ ಬಿಳಿ ಮೈಬಣ್ಣ ಮತ್ತು ಕಪ್ಪು ಚುಕ್ಕೆಗಳನ್ನು ಹೊಂದಿರುತ್ತವೆ.


**ವಿಶೇಷತೆ :** ಆಕಳುಗಳಲ್ಲಿ ಉತ್ತಮ ಹಾಲಿನ ಪ್ರಮಾಣವಿದೆ. ಎತ್ತುಗಳನ್ನು ಹೊಲದ ಕೆಲಸ ಹಾಗೂ ಮತ್ತಿತರ ಶ್ರಮದ ಕೆಲಸಗಳಿಗೆ ಬಳಸಿಕೊಳ್ಳಬಹುದು. ಸೌಮ್ಯ ಸ್ವಭಾವದ ಈ ತಳಿಯ ದನಗಳು ಜನರೊಂದಿಗೆ ಬೇಗನೆ ಹೊಂದಿಕೊಳ್ಳುತ್ತವೆ.

**ಹಾಲಿನ ಪ್ರಮಾಣ :** ಒಂದು ಕರಾವಿನಲ್ಲಿ 900ರಿಂದ 1500 ಲೀಟರ್‌ವರೆಗೆ, ಸುಮಾರು 300 ದಿನಗಳು ಕರೆಯುತ್ತವೆ



# ದೀನ್‌ದಯಾಳ್‌ಜೀ ಸ್ಮರಣೆ

ಹುಟ್ಟಿನಿಂದ ಆರಂಭಿಸಿ ಜೀವನದ ಕೊನೆಯುಸಿರಿನವರೆಗೂ ದೀನದಯಾಳರು ಅನೇಕ ಕಷ್ಟಕೋಟಲೆಗಳನ್ನು ಎದುರಿಸಬೇಕಾಯಿತು. ತನ್ನ ಎರಡೂವರೆವರ್ಷ ವಯಸ್ಸಿನಲ್ಲಿ ತಂದೆಯನ್ನು ಏಳನೆಯ ವಯಸ್ಸಿನಲ್ಲಿ ತಾಯಿಯನ್ನು, ಇನ್ನು ಕೆಲವು ವರ್ಷಗಳ ನಂತರ ಸೋದರನನ್ನು ಕಳೆದುಕೊಂಡ ಅವರು ರಾಜಸ್ಥಾನದ ಗಂಗಾಪುರದಲ್ಲಿ ಸೋದರಮಾವ ರಾಧಾರಮಣ ಶುಕ್ಲರ ಆಶ್ರಯದಲ್ಲಿ ಬೆಳೆದರು. ಹಲವು ಸಂಕಷ್ಟಗಳು ಬಡತನದ ನಡುವೆಯೂ ವಿದ್ಯಾರ್ಜನೆಯಲ್ಲಿ ಹಾಗೂ ಚುರುಕು ಬುದ್ಧಿಶಕ್ತಿಯಲ್ಲಿ ಎಂದೂ ಅವರು ಹಿಂದೆ ಬೀಳಲಿಲ್ಲ. ಅವರ ಪ್ರತಿಭೆಗೆ ಎಂದೂ ಮಂಕು ಹಿಡಿಯಲಿಲ್ಲ. ಅವರ ಬುದ್ಧಿಶಕ್ತಿಯ ಬಗ್ಗೆ ಅಭಿಮಾನ ಹೊಂದಿದ್ದ ಸೋದರಮಾವ ಪ್ರತಿಷ್ಠಿತ ಪಿಲಾನಿಯ ಬಿರ್ಲಾ ಕಾಲೇಜಿನಲ್ಲಿ ಉಚ್ಚಶಿಕ್ಷಣಕ್ಕೆ ವ್ಯವಸ್ಥೆ ಮಾಡಿದರು. ನಂತರ ಸ್ನಾತಕೋತ್ತರ ವಿದ್ಯಾಭ್ಯಾಸಕ್ಕಾಗಿ ಆಗ್ರಾಕ್ಕೆ ಹೋದರು.




ಆಗ್ರಾದಲ್ಲಿ ಓದುತ್ತಿದ್ದ ಸಮಯದಲ್ಲಿ ಅವರ ಸೋದರಮಾವನ ಮಗಳಿಗೆ ವಿಚಿತ್ರವಾದ ಒಂದು ಕಾಯಿಲೆಯಾಯಿತು, ಯಾವ ಡಾಕ್ಟರು, ವೈದ್ಯರು ಹಕೀಮರ ಔಶಧೋಪಚಾರದಿಂದಲೂ ಅವಳಿಗೆ ಗುಣವಾಗಲಿಲ್ಲ. ಅವಳನ್ನು ಸ್ವಂತ ತಂಗಿಗಿಂತ ಹೆಚ್ಚಾಗಿ ಕಾಣುತ್ತಿದ್ದ ದೀನದಯಾಳ್ ಅವಳ ಔಶಧೋಪಚಾರದ ಎಲ್ಲ ಭಾರವನ್ನು ತಾವೇ ವಹಿಸಿಕೊಂಡು ಅವಳಿಗೆ ನಿಸರ್ಗ ಚಿಕಿತ್ಸೆ ನೀಡಬೇಕೆಂದು ನಿಶ್ಚಯಿಸಿದರು. ಅದಕ್ಕೋಸ್ಕರ ಸ್ವಯಂ ತಾವೇ ಅನೇಕ ಗ್ರಂಥಗಳನ್ನು ತಂದು ಅಧ್ಯಯನ ನಡೆಸಿ ಆ ಶಾಸ್ತ್ರದಲ್ಲಿ ಪರಿಣತಿಯನ್ನೂ ಗಳಿಸಿದರು. ನಿಸರ್ಗೋಪಚಾರಕ್ಕಾಗಿ ತಂಗಿಯನ್ನು ಒಂದು ಹಳ್ಳಿಗೆ ಕರೆದುಕೊಂಡು ಹೋಗಿ ಶುಶ್ರೂಷೆಯನ್ನು ನೀಡಿದರು. ಕೆಲವು ದಿನಗಳಲ್ಲಿ ಆಕೆಯ ಕಾಯಿಲೆ ವಾಸಿಯಾಯಿತು. ತನ್ನ ಕುಟುಂಬದ ಆತ್ಮೀಯರ ಬಗ್ಗೆ ವಾತ್ಸಲ್ಯವಷ್ಟೇ ಅಲ್ಲದೇ ಅವರಿಗೆ ಕಷ್ಟವಾದಾಗ ಎಲ್ಲ ರೀತಿಯಿಂದಲೂ ಸಹಾಯಕ್ಕೆ ನಿಲ್ಲುವುದು ಅದಕ್ಕಾಗಿ ಅಗತ್ಯವಾದದ್ದನ್ನು ಹೊಂದಿಸಿಕೊಳ್ಳುವುದು ಅವರ ಸಹಜ ಸ್ವಭಾವವಾಗಿತ್ತು.

ಪಿಲಾನಿಯಲ್ಲಿ ಬಿಎ ಓದುತ್ತಿದ್ದ ಸಂದರ್ಭದಲ್ಲಿ ದೀನದಯಾಳ್ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಂಪರ್ಕಕ್ಕೆ ಬಂದರು. ನಂತರ ಸಂಘದ ಶಿಕ್ಷಣ ಶಿಬಿರಕ್ಕಾಗಿ ನಾಗಪುರಕ್ಕೂ ಹೋಗಿಬಂದರು. ಅಲ್ಲಿ ಡಾಕ್ಟರ್ ಹೆಡಗೇವಾರರ ದರ್ಶನ, ಸಹವಾಸವೂ ಅವರಿಗೆ ಲಭಿಸಿತು. ಅಷ್ಟರಲ್ಲಿ ರಾಷ್ಟ್ರಸೇವೆಯ ಧ್ಯೇಯ ಅವರ ಮನಸ್ಸಿನಲ್ಲಿ ಗಟ್ಟಿಯಾಗಿ ನೆಲೆಯಾಗಿತ್ತು. ನಂತರ ಆಗ್ರಾದಲ್ಲಿ ಸ್ನಾತಕೋತ್ತರ ಪದವಿ ಶಿಕ್ಷನ ಮುಗಿಸುವ ಹೊತ್ತಿಗೆ ವಿದ್ವತ್ತು, ವಿನಯ, ವ್ಯವಹಾರ ಕೌಶಲದೊಂದಿಗೆ ಕರ್ತೃತ್ವಶಾಲಿ ಯುವಕನಾಗಿ ರೂಪುಗೊಂಡಿದ್ದ ದೀನದಯಾಳರ ಕೈತುಂಬ ಸಂಬಳದ ಉದ್ಯೋಗ ಪಡೆದು ಸಂಸಾರ ನಡೆಸಬಹುದಾಗಿದ್ದ ಭವಿಷ್ಯ ಕಾದಿತ್ತು. ಆಗಿನ ಕಾಲದಲ್ಲಿ 250ರೂ ಸಂಬಳಕ್ಕೆ ಮುಖ್ಯೋಪಾಧ್ಯಾಯರ ಕೆಲಸ ಅವರನ್ನು ಬೇಡಿ ಬಂದಿತ್ತು. ಕುಟುಂಬದ ಏಕಮೇವ ಕುಡಿಯಾಗಿದ್ದ ಅವರು ತಮ್ಮ ವಂಶವನ್ನು ಬೆಳೆಸಬೇಕೆಂದು ಆಪ್ತೇಷ್ಟರು ಅಪೇಕ್ಷೆಪಟ್ಟರೂ ದೀನದಯಾಳರು ಎಲ್ಲರಂತೆ ಸಂಸಾರ ಹೂಡಿ ಜೀವನಸಾಗಿಸುವ ವಿಚಾರವನ್ನು ಎಂದೋ ಕೈಬಿಟ್ಟಿದ್ದರು. ಸ್ವಂತದ ಉನ್ನತಿಯಲ್ಲ, ಸಮಾಜದ ಉನ್ನತಿ, ಸಂಸಾರಕ್ಕಾಗಿ ಅಲ್ಲ ದೇಶಕ್ಕಾಗಿ ದುಡಿಮೆ ಎಂದು ಅವರು ಆಗಲೇ ಮನಸ್ಸಿನಲ್ಲಿ ನಿಶ್ಚಯಿಸಿದ್ದರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಮೂಲಕ ದೇಶದ ಸೇವೆಯಲ್ಲಿ ದುಡಿಯಲು ನಿರ್ಧರಿಸಿದ ಅವರು ಬ್ರಹ್ಮಚಾರಿಗಳಾಗಿ ಉಳಿದ ಸಂಘದ ಪ್ರಚಾರಕರಾದರು. ಈ ವಿಷಯವನ್ನು ತಿಳಿಸಲು ಅವರಿಗೆ ಆಶ್ರಯನೀಡಿ ಬೆಳೆಸಿದ ಅವರಿಗೆ ಪೂಜನೀಯರಾಗಿದ್ದ ಸೋದರಮಾವ ರಾಧಾರಮಣ ಶುಕ್ಲರಿಗೆ ಬರೆದ ಪತ್ರ ರಾಷ್ಟ್ರಸೇವೆ ಮಾಡಬಯಸುವವ ಯುವಕರಿಗೆ ಸ್ಫೂರ್ತಿದಾಯಕವಾಗಿದೆ.

ತಾನೇಕೆ ಸಂಘದ ಪ್ರಚಾರಕನಾಗಲು ಬಯಸುತ್ತಿದ್ದೇನೆ ಎನ್ನುವುದನ್ನು ಪತ್ರದಲ್ಲಿ ವಿವರಿಸಿದ ಅವರು, "ಭಗವಂತನು ನಮ್ಮ ಕುಟುಂಬಕ್ಕೆ ಸಾಕಷ್ಟು ಅನುಕೂಲತೆಗಳನ್ನು ಅನುಗ್ರಹಿಸಿದ್ದಾನೆ. ಅಂದ ಮೇಲೆ ದೇಶದ ಸೇವೆಗಾಗಿ ಕಡೆಯ ಪಕ್ಷ ಒಬ್ಬನನ್ನಾದರೂ ಕೊಡಬೇಡವೇ? ನೀವು ನನ್ನನ್ನು ವಿದ್ಯಾವಂತನನ್ನಾಗಿ ಮಾಡಿದಿರ, ನೈತಿಕವಾಗಿ ಇನ್ನಿತರ ಗುಣಗಳಲ್ಲೂ ಯೋಗ್ಯನನ್ನಾಗಿ ಮಾಡಿದಿರಿ. ಇನ್ನು ನಾವು ಚಿರರುಣಿಗಳಾಗಿರಬೇಕಾದ ಸಮಾಜಕ್ಕೆ ನನ್ನನ್ನು ಕೊಡಲಾರಿರಾ? ಇದೇನು ತ್ಯಾಗವಲ್ಲ ಬಂಡವಾಳ ಹಾಕಿದ ಹಾಗೆ; ಸಮಾಜದ ಹೊಲಕ್ಕೆ ಗೊಬ್ಬರ ಒದಗಿಸಿದಂತೆ" ಎಂದು ಬರೆದರು.

## ಮದನ್‌ಲಾಲ್ ಧಿಂಗ್ರಾ
### (ಫೆಬ್ರುವರಿ 18, 1883 – ಆಗಸ್ಟ್ 17, 1909)



ಮದನ್‌ಲಾಲ್ ಹುಟ್ಟಿದ್ದು ಫೆಬ್ರುವರಿ 18, 1883 ಅಮೃತಸರದ ಆಗರ್ಭ ಶ್ರೀಮಂತ ಧಿಂಗ್ರಾ ಕುಟುಂಬದಲ್ಲಿ. ಅವರ ತಂದೆ ದಿತ್ತಮಲ್ ಅವರು ಸರ್ಕಾರಿ ಹಿರಿಯ ವೈದ್ಯರಾಗಿ ನಿವೃತ್ತಿ ಪಡೆದಿದ್ದವರು, ಅವರ ಮೂರು ಗಂಡು ಮಕ್ಕಳು ವೈದ್ಯರಾದರೆ, ಮೂರು ಮಕ್ಕಳು ಬ್ಯಾರಿಸ್ಟರ್ ಪದವಿ ಪಡೆದವರು. ಉಳಿದೊಬ್ಬವ ಮಾತ್ರ ಅಪವಾದ, ಆತನೇ ವೀರ ಕ್ರಾಂತಿಕಾರಿ ಮದನ್‌ಲಾಲ್ ಧಿಂಗ್ರಾ.

ತನ್ನ ಎಳವೆಯಲ್ಲಿ ಮದನ್, ಲಾಲಾ ಲಜಪತ್ ರಾಯ್ ಮತ್ತು ಭಗತ್ ಸಿಂಗ್ ಅವರ ಚಿಕ್ಕಪ್ಪ ಅಜಿತ್ ಸಿಂಗ್ ಅವರುಗಳು ಸಂಘಟಿಸಿದ್ದ 'ಪಗ್ಡಿ ಸಂಭಾಲ್ ಜಟ್ಟ' ಎಂಬ ಚಳವಳಿಯಲ್ಲಿ ಪಾಲ್ಗೊಂಡು ಅದಕ್ಕಾಗಿ ಶ್ರಮಿಸಿದ. ಭಾರತೀಯರ ಬಡತನ ಮತ್ತು ಕ್ಷಾಮದ ಪರಿಸ್ಥಿತಿಯ ಕುರಿತಾಗಿನ ತೀವ್ರವಾದ ಅಧ್ಯಯನವನ್ನು ಕೈಗೊಂಡಿದ್ದ. ಸ್ವದೇಶಿ ಚಳುವಳಿಗೆ ಬದ್ಧನಾಗಿ ಲಾಹೋರಿನ ಕಾಲೇಜಿನ ದಿನಗಳಲ್ಲಿ ಬ್ರಿಟಿಷ್ ಸರ್ಕಾರ ವಿದೇಶಿ ಬಟ್ಟೆಯಲ್ಲಿ ತಯಾರಿಸಿದ ಕೋಟು ಧರಿಸಬೇಕೆಂದು ವಿಧಿಸಿದ್ದ ಶಿಸ್ತನ್ನು ವಿರೋಧಿಸಿ ಕಾಲೇಜಿನಿಂದಲೂ ಹೊರಹಾಕಲ್ಪಟ್ಟ. ಬ್ರಿಟಿಷರು ಕಾಲ್ಕಾ ಎಂಬಲ್ಲಿ ನಡೆಸುತ್ತಿದ್ದ ಕುದುರೆಗಾಡಿ ವ್ಯವಸ್ಥೆಯ 'ಟಾಂಗಾ ಸರ್ವಿಸ್' ಸಂಸ್ಥೆಯಲ್ಲಿ ಗುಮಾಸ್ತನಾದ. ಅಲ್ಲಿಯೂ ಕಾರ್ಮಿಕರ ಸಂಘಟನೆ ಮಾಡಲು ಹೋಗಿ ಕೆಲಸ ಕಳೆದುಕೊಂಡ. ಕೆಲವೊಂದು ಕಾಲ ಮುಂಬೈನಲ್ಲಿ ಸಣ್ಣಪುಟ್ಟ ಕೆಲಸ ಮಾಡಿ ತನ್ನ ಹಿರಿಯಣ್ಣ ಡಾಕ್ಟರ್ ಬಿಹಾರಿ ಲಾಲ್‌ರ ಮಾತಿನಂತೆ ಉನ್ನತ ವ್ಯಾಸಂಗಕ್ಕಾಗಿ ಇಂಗ್ಲೆಂಡಿಗೆ ಹೊರಟ.

ಇಂಗ್ಲೆಂಡಿಗೆ ಬಂದ ಧಿಂಗ್ರಾ ಇಂಜಿನಿಯರಿಂಗ್ ವಿದ್ಯಾಭ್ಯಾಸಕ್ಕೆ ತೊಡಗಿದರೂ ಶೀಘ್ರದಲ್ಲಿ ಸ್ವಾತಂತ್ರ್ಯ ಚಳವಳಿಗೆ ಇಳಿದುಬಿಟ್ಟರು. ಶ್ಯಾಮ್‌ಜೀ ಕೃಷ್ಣ ವರ್ಮ ಮತ್ತು ವೀರ ಸಾವರ್ಕರ್ ಅವರ ಪ್ರಭಾವ ಧಿಂಗ್ರಾ ಅವರನ್ನು ಸೆಳೆದುಬಿಟ್ಟಿತು. 1908ರ ಸಮಯ, ಲಂಡನ್ನಿನಲ್ಲಿ ಸಾವರ್ಕರ್ 1857 ರ ಮೊದಲ ಸ್ವಾತಂತ್ರ್ಯ ಸಂಗ್ರಾಮದ ವಾರ್ಷಿಕೋತ್ಸವ ಸ್ಮರಣ ದಿನದ ಕಾರ್ಯಕ್ರಮವನ್ನು ಆಯೋಜಿಸಿದ್ದರು. ಆ ಕಾಲಕ್ಕೆ ಲಂಡನ್ನಿನಲ್ಲಿ ವಾಸವಿದ್ದ ಬಹುತೇಕ ಭಾರತೀಯ ವಿದ್ಯಾರ್ಥಿಗಳು ಆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸಾವರ್ಕರರ ಪ್ರಭಾವದಿಂದಾಗಿ '1857 ರ ಸ್ಮರಣೆ' ಎಂದು ಕೆತ್ತಿದ್ದ ಬ್ಯಾಡ್ಜ್ ಗಳನ್ನು ತಮ್ಮ ಪೋಷಾಕಿನ ಮೇಲೆ ಅಭಿಮಾನದಿಂದ ಧರಿಸಿ ಮರುದಿನ ತಮ್ಮ ತರಗತಿಗಳಿಗೆ ತೆರಳಿದರು. ಇದು ಇಂಗ್ಲೀಷರನ್ನು ಕೆರಳಿಸಿತು. ಸುಂದರವಾಗಿ ಕೋಟು ತೊಟ್ಟು ಅದರ ಮೇಲೆ ಬ್ಯಾಡ್ಜ್‌ನ್ನು ಧರಿಸಿದ್ದ ಧಿಂಗ್ರಾನತ್ತ ಅದನ್ನು ಕೀಳಲೆಂದೇ ಒಬ್ಬ ಬ್ರಿಟೀಷ್‌ನವ ಕೈಹಾಕಿದ. ಅಷ್ಟರಲ್ಲೇ ಆತನ ಕೈ ತಡೆದ ಧಿಂಗ್ರಾ ಕೆನ್ನೆ ಉಬ್ಬುವಂತೆ ಬಾರಿಸಿ ಎದುರಾಳಿಯನ್ನು ಕೆಳಗೆ ಕೊಡವಿ ಅವನ ಎದೆಯ ಮೇಲೇ ಕುಳಿತು 'ನನ್ನ ದೇಶದ ಅಭಿಮಾನದ ಮೇಲೆ ಕೈಹಾಕಿದರೆ ಹುಷಾರ್' ಎಂದು ಅಬ್ಬರಿಸಿದ.

ಬಂಗಾಳದ ವಿಭಜನೆಗೆ ಹೊಂಚು ಹಾಕಿದ್ದ ಬ್ರಿಟಿಷ್ ಅಧಿಕಾರಿ ಕರ್ಜನ್ ವಾಯಿಲಿ ಆಗಷ್ಟೇ ಇಂಗ್ಲೆಂಡ್‌ಗೆ ಮರಳಿದ್ದ. ಲಂಡನ್ನಿನಲ್ಲಿ ನ್ಯಾಷನಲ್ ಇಂಡಿಯನ್ ಅಸೋಸಿಯೇಷನ್ ಎಂಬ ಸಂಸ್ಥೆ ಇತ್ತು. ಇಂಗ್ಲೆಂಡ್‌ಗೆ ಬಂದ ಭಾರತೀಯ ತರುಣರ ದಾರಿತಪ್ಪಿಸಿ ಬ್ರಿಟಿಷರಿಗೆ ನಿಷ್ಠರನ್ನಾಗಿ ಮಾಡುವುದು ಈ ಸಂಸ್ಥೆಯ ಕೆಲಸವಾಗಿತ್ತು. ವಿಲಿಯಂ ಕರ್ಜನ್ ವಾಯಿಲಿ ಅದರ ಮುಖ್ಯಸ್ಥನಾಗಿ ಕೆಲಸ ಮಾಡುತ್ತಿದ್ದ. ಸಹಜವಾಗಿ ಕ್ರಾಂತಿಕಾರಿಗಳ ಸಿಟ್ಟು ಆತನೆಡೆ ತಿರುಗಿತು. ತನ್ನ ತಂದೆಯ ಮೂಲಕ ಅವನ ಪರಿಚಯ ಗಳಿಸಿಕೊಂಡ ಮದನ್ ಲಂಡನ್ನಿನ ಜಹಾಂಗೀರ್ ಹಾಲ್‌ನ ತುಂಬಿದ ಸಭೆಯಲ್ಲಿ ಕರ್ಜನ್ ವ್ಯಾಲಿಯ ಗುಂಡಿಟ್ಟು ಕೊಂದು ಬ್ರಿಟಿಷರ ನೆಲದಲ್ಲೇ ಅವರನ್ನು ಬೆಚ್ಚಿಬೀಳಿಸಿದ. ಲಂಡನ್ ಒಮ್ಮೆಗೆ ನಡುಗಿಹೋಯಿತು. ಸ್ವಾತಂತ್ರ್ಯ ಕ್ರಾಂತಿಯ ಜ್ಯೋತಿ ಬ್ರಿಟಿಷ್ ನೆಲದಲ್ಲೇ ಮೊಳಗಿತ್ತು. ಘಟನೆಯ ನಂತರ ಧಿಂಗ್ರಾ ಪಲಾಯನ ಮಾಡಲಿಲ್ಲ. ತಾನೇ ಪೊಲೀಸರಿಗೆ ಶರಣಾದ. ನ್ಯಾಯಾಲಯದಲ್ಲಿ ತನ್ನ ಪರವಾಗಿ ತಾನೇ ವಾದ ಮಾಡಿ ತನ್ನದು ದೇಶಪ್ರೇಮದ ಪವಿತ್ರ ಕಾರ್ಯ ಎಂದು ಸಮರ್ಥಿಸಿಕೊಂಡ. ತನಗೆ ಮರಣದಂಡನೆಯೇ ಸೂಕ್ತ ಎಂದೂ ಧೀರ ಮದನ್ ಲಾಲ್ ಧಿಂಗ್ರಾ ಅಭಿಮಾನದಿಂದ ಕೇಳಿದ

"ತಾಯಿ ಭಾರತಿಯ ಸೇವೆಯೆಂದರೆ ಪ್ರಭು ಶ್ರೀರಾಮನ ಸೇವೆ. ಆ ತಾಯಿಗೆ ಅಪಮಾನವಾದರೆ ಶ್ರೀ ರಾಮನಿಗೆ ಅಪಮಾನವಾದಂತೆ. ಆ ದೊಡ್ಡ ತಾಯಿಗೆ ಈ ದಡ್ಡ ಮಗ ತನ್ನ ರಕ್ತವನ್ನಲ್ಲದೆ ಇನ್ನೇನು ತಾನೇ ಕೊಡಲಿಕ್ಕೆ ಸಾಧ್ಯ?. ಆದ್ದರಿಂದ ನಾನು ಹೆಮ್ಮೆಯಿಂದ ಪ್ರಾಣ ಬಿಡುತ್ತಿದ್ದೇನೆ. ನನ್ನ ತಾಯ್ನಾಡು ಸ್ವತಂತ್ರವಾಗುವವರೆಗೂ ಇದೇ ತಾಯಿಯ ಹೊಟ್ಟೆಯಲ್ಲಿ ಮತ್ತೆಮತ್ತೆ ಹುಟ್ಟಬೇಕು. ಇದೇ ಧ್ಯೇಯಕ್ಕಾಗಿ ಬಲಿದಾನ ನೀಡಬೇಕು. ಇದೊಂದೇ ನಾನು ದೇವರಲ್ಲಿ ಮಾಡುವ ಪ್ರಾರ್ಥನೆ" ಹಾಗಂತ ಬಲಿದಾನದ ಮುನ್ನ ಹೇಳಿದ್ದ ಧಿಂಗ್ರಾ. 1909 ಆಗಸ್ಟ್ 17 ರಂದು ಈ ಅಪ್ರತಿಮ ಕ್ರಾಂತಿಕಾರಿಗೆ ಮರಣದಂಡನೆಯ ಶಿಕ್ಷೆ ನೀಡಲಾಯಿತು.

ವಿದೇಶಿ ನೆಲದಲ್ಲಿ ತಾಯಿಭಾರತಿಯ ಮುಕ್ತಿಗೆ ಅರ್ಪಿತವಾದ ಮೊದಲ ಕುಸುಮ ಮದನ್ ಲಾಲ್.

**ಸಂಪಾದಕೀಯ ಸಹಕಾರ** ಶೈಲೇಶ್ ಕುಲಕರ್ಣಿ, ಪ್ರವೀಣ್ ಪಟವರ್ಧನ್, ಶ್ರೀವತ್ಸ, ಶ್ರೀನಿವಾಸ್ ಹೆಗಡೆ, ರಾಧಾಕೃಷ್ಣ ಹೊಳ್ಳ, ಮೊಳಹಳ್ಳಿ ಅನಿಲಕುಮಾರ್, ಸತ್ಯಾನಾರಾಯಣ ಶಾನಭಾಗ್

## ಲಷ್ಕರ್–ಇ–ತೋಯ್ಬಾ ಮುಖ್ಯಸ್ಥ ಅಬು ದುಜಾನಾ ಹತ್ಯೆ


ಮಹತ್ತ್ವದ ಕಾರ್ಯಾಚರಣೆಯೊಂದರಲ್ಲಿ ಲಷ್ಕರ್–ಇ–ತೋಯ್ಬಾ ಭಯೋತ್ಪಾದಕ ಸಂಘಟನೆಯ ಕಾಶ್ಮೀರದ ಮುಖ್ಯಸ್ಥ ಪಾಕಿಸ್ತಾನ ಮೂಲದ ಅಬು ದುಜಾನಾನನ್ನು ಭಾರತೀಯ ಸೇನೆ ಇತ್ತೀಚೆಗೆ ಹತ್ಯೆಗೈದಿದೆ. ಆಪರೇಷನ್ ಆಲ್ ಔಟ್ ಹೆಸರಿನಲ್ಲಿ ನಡೆಸುತ್ತಿರುವ ಈ ಕಾರ್ಯಾಚರಣೆಯಲ್ಲಿ ಕಳೆದ 3 ತಿಂಗಳಲ್ಲಿ 50 ಕ್ಕೂ ಹೆಚ್ಚು ಭಯೋತ್ಪಾದಕರನ್ನು ಸೇನೆ ಕೊಂದಿದೆ.

ಅನೇಕ ಭಯೋತ್ಪಾದಕ ಕೃತ್ಯಗಳಲ್ಲಿ ಭಾಗಿಯಾಗಿದ್ದಷ್ಟೇ ಅಲ್ಲದೇ, ಕಾಶ್ಮೀರ ಕಣಿವೆಯ ಜನರ ಮನೆಗೆ ನುಗ್ಗಿ ಅವರ ಮನೆಯ ಹೆಣ್ಣು ಮಕ್ಕಳಿಗೂ ತೊಂದರೆ ಕೊಡುತ್ತಿದ್ದ ದುಜಾನಾ ಹತ್ಯೆಯಿಂದ ಅಲ್ಲಿನ ಜನ ನೆಮ್ಮದಿಯ ನಿಟ್ಟುಸಿರು ಬಿಡುವಂತಾಗಿದೆ. ಅನೇಕ ಭಯೋತ್ಪಾದಕ ಕೃತ್ಯಗಳಲ್ಲಿ ಪೊಲೀಸರಿಗೆ ಬೇಕಾಗಿದ್ದ ಈತನ ತಲೆಗೆ 15 ಲಕ್ಷ ಬಹುಮಾನ ಘೋಷಿಸಲಾಗಿತ್ತು. ಆತ ಅಡಗಿಕೊಂಡಿದ್ದ ಮನೆಯನ್ನು ಸುತ್ತುವರಿದ ಪೊಲೀಸರು ಮತ್ತು ಸೇನೆ ಫೋನಿನಲ್ಲಿ ಆತನೊಂದಿಗೆ ಮಾತನಾಡಿ ಶರಣಾಗುವಂತೆ ಮನವೊಲಿಸಲು ಪ್ರಯತ್ನಿಸಿತು. ಆದರೆ, ಅದಕ್ಕೊಪ್ಪದ ಆತ ಗುಂಡಿನ ದಾಳಿ ಮುಂದುವರಿಸಿದ. ಬಳಿಕ ಸೇನೆಯ ಗುಂಡಿಗೆ ಬಲಿಯಾದ.



ದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ರಾಷ್ಟ್ರವಿರೋಧಿ ಪ್ರದರ್ಶನಗಳು ಕಳೆದ ವರ್ಷ ನಡೆದಿದ್ದು ನಮಗೆಲ್ಲ ನೆನಪಿದೆ. ಜೆಎನ್‌ಯುನ ವಿದ್ಯಾರ್ಥಿಗಳಲ್ಲಿ ದೇಶಭಕ್ತಿ ಮೂಡಿಸುವ ಪ್ರಯತ್ನ ಮಾಡುತ್ತಿರುವ ಈಗಿನ ಉಪಕುಲಪತಿ ಜಗದೀಶ ಕುಮಾರ್ ಅವರು ವಿಶ್ವವಿದ್ಯಾಲಯದ ಆವರಣದಲ್ಲಿ ಒಂದು ಮಿಲಿಟರಿ ಟ್ಯಾಂಕನ್ನು ಸ್ಥಾಪಿಸುವಂತೆ ಕೇಂದ್ರ ಸರ್ಕಾರವನ್ನು ವಿನಂತಿಸಿದ್ದಾರೆ. ಇತ್ತೀಚೆಗೆ ಜೆಎನ್‌ಯುನಲ್ಲಿ ನಡೆದ ಕಾರ್ಗಿಲ್ ವಿಜಯ ದಿವಸದ ಆಚರಣೆಯ ಸಂದರ್ಭದಲ್ಲಿ ಅವರು ಈ ಮನವಿ ಮಾಡಿದ್ದಾರೆ. ಇದರಿಂದ ವಿದ್ಯಾರ್ಥಿಗಳಲ್ಲಿ ನಮ್ಮ ದೇಶದ ಬಗ್ಗೆ ಹೆಮ್ಮೆ ಮತ್ತು ಗೌರವ ಮೂಡಲು ಸಹಾಯವಾಗಲಿದೆ ಎಂಬುದು ಅವರ ವಿಶ್ವಾಸ. ವಿದ್ಯಾರ್ಥಿಗಳಲ್ಲಿ ದೇಶವಿರೋಧಿ ಭಾವನೆಗಳನ್ನು ಮೂಡಿಸಲು ಹೆಸರಾಗಿದ್ದ ಜೆಎನ್‌ಯುನಲ್ಲಿ ಇಂತಹ ಬದಲಾವಣೆಗಳು ಆಗುತ್ತಿರುವುದು ಸಂತೋಷದ ವಿಚಾರ.

**ಭಯೋತ್ಪಾದಕರಿಗೆ ಧನ ಸಹಾಯ ಮಾಡಿದ ಆರೋಪದ ಮೇಲೆ 7 ಕಾಶ್ಮೀರಿ ಪ್ರತ್ಯೇಕತಾವಾದಿಗಳನ್ನು ರಾಷ್ಟ್ರೀಯ ತನಿಖಾ ದಳ ಇತ್ತೀಚೆಗೆ ಬಂಧಿಸಿದೆ. ಪ್ರತ್ಯೇಕತಾವಾದಿ ನಾಯಕ ಸಯ್ಯದ್ ಅಲಿ ಶಾ ಗಿಲಾನಿಯ ಅಳಿಯ ಅಲ್ತಾಫ್ ಅಹ್ಮದ್ ಶಾ ಮೊದಲಾದ ಪ್ರತ್ಯೇಕತಾವಾದಿ ನಾಯಕರು ಇದರಲ್ಲಿ ಸೇರಿದ್ದಾರೆ. ಹಿಜ್ಬುಲ್ ಮುಜಾಹಿದೀನ್, ಲಷ್ಕರ್–ಇ–ತೋಯ್ಬಾ ಮೊದಲಾದ ಭಯೋತ್ಪಾದಕ ಸಂಘಟನೆಗಳಿಗೆ ಸಹಾಯ ಮಾಡುತ್ತಿದ್ದ ಇವರ ಮೇಲೆ ಮೇ 30 ರಂದು ಮೊಕದ್ದಮೆ ದಾಖಲಿಸಿ ತನಿಖೆ ನಡೆಸಲಾಗುತ್ತಿತ್ತು. ಇದೇ ಮೊದಲ ಬಾರಿಗೆ ಕಾಶ್ಮೀರದ ಪ್ರತ್ಯೇಕತಾವಾದಿಗಳನ್ನು ಬಂಧಿಸಿದ್ದು, ಕೇಂದ್ರ ಸರ್ಕಾರ ಪ್ರತ್ಯೇಕತಾವಾದಿಗಳ ಬಗ್ಗೆ ಕಠಿಣ ಧೋರಣೆ ತಳೆಯುತ್ತಿರುವುದು ಒಳ್ಳೆಯ ಬೆಳವಣಿಗೆ ಎಂದು ಎಲ್ಲೆಡೆ ಅಭಿಪ್ರಾಯ ವ್ಯಕ್ತವಾಗುತ್ತಿದೆ.**




ಕೇಂದ್ರ ಸರ್ಕಾರ ಕಳೆದ ವರ್ಷ ಬಿಡುಗಡೆ ಮಾಡಿದ, ಮೊಬೈಲ್ ಮೂಲಕ ಸುಲಭವಾಗಿ ಹಣ ವರ್ಗಾವಣೆ ಮಾಡಲು ಅವಕಾಶ ಮಾಡಿಕೊಡುವ ಭೀಮ್ ಆ್ಯಪ್ ಅನ್ನು ಇದುವರೆಗೆ ಸುಮಾರು 2 ಕೋಟಿಗೂ ಹೆಚ್ಚು ಜನ ತಮ್ಮ ಮೊಬೈಲ್‌ನಲ್ಲಿ ಹಾಕಿಕೊಂಡಿದ್ದು, 1,500 ಕೋಟಿಗೂ ಹೆಚ್ಚು ಹಣ ಇದರ ಮೂಲಕ ವರ್ಗಾವಣೆಯಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

**ದೆಹಲಿ ನಗರದಲ್ಲಿ 75 ಸಂಸ್ಕೃತ ಕಲಿಕಾ ಕೇಂದ್ರಗಳನ್ನು ಅಲ್ಲಿನ ರಾಜ್ಯ ಸರ್ಕಾರ ತೆರೆಯಲಿದೆ. ಮೂರು ತಿಂಗಳ ಸರ್ಟಿಫಿಕೇಟ್ ಕೋರ್ಸ್‌ಗಳು ಇಲ್ಲಿ ಜನಸಾಮಾನ್ಯರಿಗೆ ಲಭ್ಯವಿದ್ದು ದಿನಬಳಕೆಗೆ ಬೇಕಾದಷ್ಟು ಸಂಸ್ಕೃತವನ್ನು ಜನರು ಕಲಿಯಬಹುದಾಗಿದೆ. ಇತ್ತೀಚೆಗೆ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಮಂತ್ರಿ ಮನೀಷ್ ಸಿಸೋಡಿಯಾ ಅವರು ದಿನನಿತ್ಯ ಜನರು ಪೂಜೆಯ ಮಂತ್ರಗಳಲ್ಲಿ ಸಂಸ್ಕೃತ ಬಳಸಿದರೂ ಅದರ ಅರ್ಥ ತಿಳಿಯರು. ಈ ಕೇಂದ್ರಗಳಿಂದ ಎಲ್ಲರೂ ಸಂಸ್ಕೃತ ಕಲಿಯಲು ಅನುಕೂಲವಾಗಲಿದೆ ಎಂದಿದ್ದಾರೆ.**

2015ರ ಏಪ್ರಿಲ್‌ನಲ್ಲಿದ್ದ 18,452 ವಿದ್ಯುದೀಕರಣವಾಗದ ಗ್ರಾಮಗಳ ಪೈಕಿ ಈಗಾಗಲೇ 13,872 ಗ್ರಾಮಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. 2018ರ ಮೇ ತಿಂಗಳೊಳಗೆ ಉಳಿದ ಎಲ್ಲಾ ಗ್ರಾಮಗಳಿಗೂ ವಿದ್ಯುತ್ ಸಂಪರ್ಕ ಕಲ್ಪಿಸುವ ಮಹತ್ವಾಕಾಂಕ್ಷಿ ಯೋಜನೆಯನ್ನು ಕೇಂದ್ರದ ಬಿಜೆಪಿ ಸರ್ಕಾರ ಹೊಂದಿದೆ ಎಂದು ಇಂಧನ ಮಂತ್ರಿ ಪೀಯೂಷ್ ಗೋಯಲ್ ತಿಳಿಸಿದ್ದಾರೆ.

**ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳಲ್ಲೊಂದಾದ ಪ್ರಧಾನ್ ಮಂತ್ರಿ ಕೌಶಲ್‌ವಿಕಾಸ್ ಯೋಜನೆಯಡಿಯಲ್ಲಿ ಸುಮಾರು 31 ಲಕ್ಷಯುವಕರು ತರಬೇತಿ ಪಡೆದಿದ್ದಾರೆ ಎಂದು ಸರ್ಕಾರ ಹೇಳಿದೆ. ಭಾರತೀಯ ಭೂಸೇನೆ, ವಾಯುಸೇನೆ ಹಾಗೂ ನೌಕಾಪಡೆಯಲ್ಲಿ ನಿವೃತರಾದವರನ್ನು ತರಬೇತುದಾರರನ್ನಾಗಿ ಬಳಸಿಕೊಳ್ಳಲಾಗುವುದು ಎಂದು ಕೇಂದ್ರ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ಮಂತ್ರಾಲಯ ಸಚಿವ**

## ಸಾಲುದ್ದದ ಸುದ್ದಿಗಳು

**ರಾಜೀವ್ ಪ್ರತಾಪ್ ರೂಡಿ ಲೋಕಸಭೆಯಲ್ಲಿ ನೀಡಿದ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ. ದೇಶದಾದ್ಯಂತ ಯುವಕರಿಗೆ ವೃತ್ತಿ ಕೌಶಲ್ಯ ತರಬೇತಿ ನೀಡಿ ಕೈಗಾರಿಕೆಗಳು ಎದುರಿಸುತ್ತಿರುವ ಪರಿಣತಿ ಉಳ್ಳ ಮಾನವಸಂಪನ್ಮೂಲ ಕೊರತೆಯನ್ನು ನೀಗುವುದರ ಜೊತೆಗೆ, ಸರಿಯಾದ ತರಬೇತಿ ಇಲ್ಲದ ಕಾರಣ ಉದ್ಯೋಗಾವಕಾಶ ಇದ್ದರೂ ಅದನ್ನು ನಿಭಾಯಿಸುವ ಸಾಮರ್ಥ್ಯವಿಲ್ಲದ ಕಾರಣ ನಿರುದ್ಯೋಗಿಗಳಾಗಿರುವವರಿಗೆ ತರಬೇತಿ ನೀಡುವ ಸಲುವಾಗಿ ಪ್ರಸ್ತುತ ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬಂದ ನಂತರ 2014ರ ನವೆಂಬರ್‌ನಲ್ಲಿ ಕೌಶಲ್ಯ ವಿಕಾಸ ಮತ್ತು ಉದ್ಯಮಶಿಲತೆ ಮಂತ್ರಾಲಯವನ್ನು**(Ministry of Skill Development and Entrepreneurship) **ಆರಂಭಿಸಿತು. ಕೌಶಲ ಭಾರತ–ಕುಶಲ ಭಾರತ ಎನ್ನುವುದು ಈ ಯೋಜನೆಯ ಧ್ಯೇಯವಾಗಿದ್ದು ದೇಶದಾದ್ಯಂತ ಪ್ರಧಾನ ಮಂತ್ರಿ ಕೌಶಲ ಕೇಂದ್ರ ಹೆಸರಿನ ತರಬೇತಿ ಕೇಂದ್ರಗಳನ್ನು ನಡೆಸಲಾಗುತ್ತದೆ.**



ಮುಂದಿನ ವರ್ಷದ ವೇಳೆಗೆ ಅತಿ ಹೆಚ್ಚು 4ಜಿ ಮೊಬೈಲ್ ಬಳಕೆದಾರರಿರುವ ರಾಷ್ಟ್ರಗಳ ಪಟ್ಟಿಯಲ್ಲಿ ಭಾರತ ಎರಡನೆಯ ಸ್ಥಾನಕ್ಕೇರಲಿದೆ. ಪ್ರಸ್ತುತ ಚೀನಾ, ಅಮೇರಿಕಾಗಳ ನಂತರ ಭಾರತ ಮೂರನೆಯ ಸ್ಥಾನದಲ್ಲಿದೆ. ಮುಂದಿನ ವರ್ಷದ ವೇಳೆಗೆ ಚೀನಾ 780 ದಶಲಕ್ಷ, ಭಾರತ 340 ದಶಲಕ್ಷ ಹಾಗೂ ಅಮೇರಿಕಾ 245 ದಶಲಕ್ಷ 4ಜಿ ಮೊಬೈಲ್ ಬಳಕೆದಾರರನ್ನು ಹೊಂದಿರಲಿವೆ ಎಂದು ಅಂದಾಜಿಸಲಾಗಿದೆ. ಪ್ರಸ್ತುತ ಭಾರತದಲ್ಲಿ ಒಟ್ಟೂ ಮೊಬೈಲ್ ಸಂಪರ್ಕದ ಸಂಖ್ಯೆ 118 ಕೋಟಿ ದಾಟಿದ್ದು ನೂರರಲ್ಲಿ 91ಜನರಿಗೆ ಮೊಬೈಲ್ ಸಂಪರ್ಕವಿದೆ. ಭಾರತ ಚೀನಾ ನಂತರ ಎರಡನೇ ಸ್ಥಾನದಲ್ಲಿದೆ.

पुंगव PUNGAVA
# 74, Ranga Rao Road, Shankarapuram,
Bangalore - 560 004. Ph: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10th and 25th of every Month REG.NO.CPMG/KA/BGS/102/2015-17
FORTNIGHTLY 15-8-2017



# ಶಿಕ್ಷಣ ಸಂಸ್ಥೆಗಳಲ್ಲಿ, ಕಚೇರಿಗಳಲ್ಲಿ 'ವಂದೇ ಮಾತರಂ' ಕಡ್ಡಾಯ ಮದ್ರಾಸ್ ಹೈಕೋರ್ಟ್ ಆದೇಶ

ತಮಿಳುನಾಡಿದ ಶಿಕ್ಷಣ ಸಂಸ್ಥೆಗಳಲ್ಲಿ, ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಲ್ಲಿ ವಂದೇ ಮಾತರಂ ಹಾಡುವುದು ಕಡ್ಡಾಯ ಎಂದು ಮದ್ರಾಸ್ ಹೈಕೋರ್ಟ್ ಆದೇಶಿಸಿದೆ. ರಾಜ್ಯದಲ್ಲಿರುವ ಖಾಸಗಿ ಮತ್ತು ಸರ್ಕಾರಿ ಶಾಲೆಗಳಲ್ಲಿನ ವಿದ್ಯಾರ್ಥಿಗಳು ಸೋಮವಾರ ಮತ್ತು ಶುಕ್ರವಾರ ವಾರದ ಎರಡು ದಿನಗಳಲ್ಲಿ ವಂದೇ ಮಾತರಂ ಹಾಡುವುದನ್ನು ಶೈಕ್ಷಣಿಕ ಸಂಸ್ಥೆಗಳು ಕಡ್ಡಾಯ ಮಾಡಬೇಕು. ಖಾಸಗಿ ಮತ್ತು ಸರ್ಕಾರಿ ಕಚೇರಿಗಳಲ್ಲಿ ತಿಂಗಳಲ್ಲಿ ಒಂದು ದಿನ ಒಂದು ಬಾರಿಯಾದರೂ ವಂದೇ ಮಾತರಂ ಹಾಡಬೇಕು ಎಂದು ಹೈಕೋರ್ಟ್ ಆದೇಶಿಸಿದೆ.

ಒಂದು ವೇಳೆ ಅದು ಬಂಗಾಳಿಯಲ್ಲಿ ಅಥವಾ ಸಂಸ್ಕೃತದಲ್ಲಿದೆ ಎಂದು ಯಾರಿಗಾದರೂ ಹಾಡಲು ಕಷ್ಟವಾದರೆ ಅದನ್ನು ತಮಿಳಿಗೆ ಅನುವಾದ ಮಾಡಿ. ಯಾರಿಗಾದರೂ ವಂದೇ ಮಾತರಂ ಹಾಡುವುದು ಕಷ್ಟವಾದರೆ ಅಂತವರಲ್ಲಿ ಹಾಡಲೇಬೇಕು ಎಂದು ಬಲವಂತವಾಗಿ ಒತ್ತಾಯ ಮಾಡಿ ಹಾಡಿಸುವುದು ಸಲ್ಲ. ಅವರು ಯಾಕೆ ಹಾಡುವುದಿಲ್ಲ ಎಂಬುದಕ್ಕೆ ತಕ್ಕ ಕಾರಣಗಳನ್ನೂ ಅವರು ನೀಡಬೇಕು. ನಮ್ಮ ದೇಶದ ಯುವಜನರೇ ನಮ್ಮ ದೇಶದ ನಿರೀಕ್ಷೆ ಮತ್ತು ಭರವಸೆ. ಹಾಗಾಗಿ ರಾಷ್ಟ್ರದ ಅಭಿವೃದ್ಧಿಗೆ ಶ್ರಮಿಸುವ ಉತ್ತಮ ನಾಗರಿಕರಾಗಲು ಪ್ರತಿಯೊಬ್ಬರು ಪ್ರಯತ್ನಿಸಬೇಕು ಎಂದು ಹೈಕೋರ್ಟ್ ಪೀಠ ಅಭಿಪ್ರಾಯಪಟ್ಟಿದೆ.

ಸುಪ್ರೀಂ ಕೋರ್ಟ್ ಈಗಾಗಲೇ ಎಲ್ಲಾ ಚಿತ್ರಮಂದಿರಗಳಲ್ಲಿ ಸಿನಿಮಾ ಪ್ರದರ್ಶನ ಮಾಡುವ ಮುನ್ನ ರಾಷ್ಟ್ರಗೀತೆ ಹಾಡುವುದನ್ನು ಕಡ್ಡಾಯಗೊಳಿಸಿದೆ. ಬ್ರಿಟಿಷರ ಕಾಲದಲ್ಲಿ ರಾಷ್ಟ್ರದ ಜನತೆಗೆ ಸ್ವಾತಂತ್ರ್ಯದ ಜಾಗೃತಿಯನ್ನುಂಟು ಮಾಡಿದ ವಂದೇ ಮಾತರಂ'ಗೀತೆ ಬಂಕಿಮಚಂದ್ರ ಚಟರ್ಜಿ ಅವರು 1882ರಲ್ಲಿ ಬರೆದ ಆನಂದ ಮಠ'ಎಂಬ ಕೃತಿಯ ಭಾಗವಾಗಿದೆ. ಇದನ್ನು 1896ರಲ್ಲಿ ನಡೆದ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಅಧಿವೇಶನದಲ್ಲಿ ಮೊತ್ತಮೊದಲ ಬಾರಿಗೆ ರವೀಂದ್ರನಾಥ ಟಾಗೋರ್ ಅವರು ಹಾಡಿದರು. 1950ರಲ್ಲಿ ಭಾರತ ಸರ್ಕಾರ ಈ ಗೀತೆಯ ಮೊದಲ ಎರಡು ಪದ್ಯ ಭಾಗಗಳಿಗೆ ಭಾರತೀಯ ಗಣರಾಜ್ಯದ ರಾಷ್ಟ್ರೀಯ ಗಾನ ಎಂಬ ಅಧಿಕೃತ ಮನ್ನಣೆ ನೀಡಿದೆ.

# ಗಡಿಕಾಯುವ ಯೋಧರಿಗೆ ಮಕ್ಕಳ ರಕ್ಷಾಬಂಧನ



ತಮಿಳುನಾಡಿನ ಕರೂರು ಮತ್ತು ಕೋಯಮತ್ತೂರಿನ ಸುಮಾರು ಹದಿನೈದು ಸಾವಿರ ಮಕ್ಕಳು ಸ್ವಯಂ ತಾವೇ ತಯಾರಿಸಿದ ರಾಖಿಯ ಜೊತೆಗೆ ರಕ್ಷಾಬಂಧನ ಸಂದೇಶವನ್ನು ದೂರದ ಅರುಣಾಚಲ, ಸಿಕ್ಕಿಂ ಮತ್ತು ಹಿಮಾಲಯದ ಗಡಿಗಳಲ್ಲಿ ದೇಶದ ರಕ್ಷಣೆ ಮಾಡುತ್ತಿರುವ ಯೋಧರಿಗೆ ಕಳುಹಿಸಿದ್ದಾರೆ. ಸ್ಟುಡೆಂಟ್ಸ್ ಫಾರ್ ಸೋಲ್ಜರ್ಸ್ ಮತ್ತು ಸಿಸ್ಟರ್ಸ್ ಆಫ್ ಜವಾನ್ಸ್ ಎಂಬ ಹೆಸರಿನ ಎರಡು ಸಂಘಟನೆಗಳ ಮುಖಾಂತರ ಈ ದೇಶಪ್ರೇಮಿ ಮಕ್ಕಳು ರಕ್ಷೆ ಮತ್ತು ಸಂದೇಶವನ್ನು ರವಾನಿಸಿದ ಈ ಮಕ್ಕಳು "ಇದು ತಮ್ಮ ಪ್ರಾಣವನ್ನೇ ಒತ್ತೆ ಇಟ್ಟು ದೇಶದ ರಕ್ಷಣೆ ಮಾಡುವ ಸೈನಿಕರಿಗೆ ನಾವು ತೋರಿಸುವ ಸಣ್ಣ ಕೃತಜ್ಞತೆ" ಎಂದು ಹೇಳುತ್ತಾರೆ. ತಮಿಳು ನಾಡು ಅಷ್ಟೇ ಅಲ್ಲದೇ ಜಮ್ಮು ಕಾಶ್ಮೀರ, ಗುಜರಾತ್, ಸಿಕ್ಕಿಂ, ರಾಜಸ್ಥಾನ ಮೊದಲಾದ ಪ್ರದೇಶಗಳ ಮಕ್ಕಳೂ ಸಾವಿರಾರು ರಾಖಿಗಳನ್ನು ಸೈನಿಕರಿಗೆ ಕಳುಹಿಸಿದ್ದಾರೆ.

# ಹುಟ್ಟೂರಿನಲ್ಲಿ ಕಲಾಮ್ ಸ್ಮೃತಿಮಂದಿರ




ಪ್ರೇರಣೆಯ ಮೂರ್ತಿಯಾದ ಮಾಜಿ ರಾಷ್ಟ್ರಪತಿ ಹಾಗೂ ವಿಜ್ಞಾನಿ ಡಾ ಅಬ್ದುಲ್ ಕಲಾಮ್‌ರ ಎರಡನೇ ಪುಣ್ಯಸ್ಮರಣೆಯ ಸಂದರ್ಭದಲ್ಲಿ ಅವರ ಹುಟ್ಟೂರಾದ ರಾಮೇಶ್ವರಂನಲ್ಲಿ ಅವರನ್ನು ಸಮಾಧಿ ಮಾಡಿದ ಸ್ಥಳದಲ್ಲಿ ನಿರ್ಮಿಸಿದ ಸ್ಮೃತಿಮಂದಿರವನ್ನು ಪ್ರಧಾನಿ ಮೋದಿ ಲೋಕಾರ್ಪಣೆ ಮಾಡಿದರು. ರಾಮೇಶ್ವರಂನ ಪೈಕರಂಬು ಗ್ರಾಮದ 2.11 ಎಕರೆ ಪ್ರದೇಶದಲ್ಲಿ ಸುಮಾರು 15 ಕೋಟಿ ರೂಪಾಯಿ ವೆಚ್ಚದಲ್ಲಿ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಆಖಆಔ) ಮಿಸ್ಸೈಲ್ ಮ್ಯಾನ್ ಎಂದೇ ಪ್ರಸಿದ್ಧರಾಗಿದ್ದ ಕಲಾಮ್ ನೆನಪಿನಲ್ಲಿ ಈ ಸ್ಮೃತಿಮಂದಿರವನ್ನು ನಿರ್ಮಿಸಿದೆ. ಈ ಸ್ಮೃತಿಮಂದಿರಲ್ಲಿ ಸುಮಾರು 900 ಚಿತ್ರಪಟಗಳು ಹಾಗೂ ಕಲಾಮರ ಸುಮಾರು 200 ಅಪರೂಪದ ಫೋಟೊಗಳನ್ನು ಸಾರ್ವಜನಿಕ ವೀಕ್ಷಣೆಗೆ ಇರಿಸಲಾಗಿದ್ದು ಪ್ರವೇಶದ್ವಾರದಲ್ಲಿ ಕಂಚಿನ ಪ್ರತಿಮೆ ಹಾಗೂ ಒಳಗಡೆ ವೀಣೆ ನುಡಿಸುತ್ತಿರುವ ಕಲಾಮ್‌ರ ಮರದ ಪ್ರತಿಮೆಗಳನ್ನೂ ಸ್ಥಾಪಿಸಲಾಗಿದೆ.

# ಮತಾಂತರ ನಿಷೇಧ ಕಾಯಿದೆಗೆ ಜಾರ್ಖಂಡ್ ಮಂತ್ರಿಮಂಡಳ ಅಂಗೀಕಾರ

ರಾಜ್ಯದಲ್ಲಿ ಮತಾಂತರವನ್ನು ನಿಷೇಧಿಸುವ ಜಾರ್ಖಂಡ ಮತೀಯ ಸ್ವಾಂತಂತ್ರ ಕರಡು ಮಸೂದೆ 2017ಕ್ಕೆ (Jharkhand Religious Independence Bill 2017) ಜಾರ್ಖಂಡ್ ಮಂತ್ರಿಮಂಡಳ ಒಪ್ಪಿಗೆ ನೀಡಿದೆ. ಈ ಮಸೂದೆಯಲ್ಲಿ ಬಲವಂತದ ಮತಾಂತರವನ್ನು ನಿಷೇಧಿಸುವ ಪ್ರಸ್ತಾವನೆಯಿದ್ದು ಬಲವಂತದ ಮತಾಂತರಕ್ಕೆ ಮೂರು ವರ್ಷ ಜೈಲು ಮತ್ತು 50 ಸಾವಿರ ರೂಪಾಯಿ ದಂಡದ ಶಿಕ್ಷೆ ಹೇಳಲಾಗಿದೆ. ಮತಾಂತರಕ್ಕೆ ಒಳಗಾದ ವ್ಯಕ್ತಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಅಥವಾ ಅಪ್ರಾಪ್ತ ವಯಸ್ಕರಾಗಿದ್ದರೆ ನಾಲ್ಕು ವರ್ಷ ಜೈಲು ಮತ್ತು ಒಂದು ಲಕ್ಷ ದಂಡದ ಶಿಕ್ಷೆ ವಿಧಿಸಲಾಗುವುದು. 2011ರ ಜನಗಣತಿಯ ಅನುಸಾರ ರಾಜ್ಯದ ಜನಸಂಖ್ಯೆಯ ಶೇಕಡ 26ಕ್ಕೂ ಹೆಚ್ಚು ಬುಡಕಟ್ಟು ಜನರಿದ್ದು ಕೆಲವು ಜಿಲ್ಲೆಗಳಲ್ಲಿ ಶೇ 60ಕ್ಕೂ ಹೆಚ್ಚು ಪರಿಶಿಷ್ಟ ಪಂಡಗಕ್ಕೇ ಸೇರಿದ ಬುಡಕಟ್ಟು ಜನರಿದ್ದಾರೆ. ಇವರಲ್ಲಿ ಶೇ 90ಕ್ಕೂ ಹೆಚ್ಚು ಗ್ರಾಮೀಣ ಪ್ರದೇಶದಲ್ಲಿ ವಾಸಿಸುವವರಾಗಿದ್ದಾರೆ. ಕ್ರಿಶ್ಚಿಯನ್ ಮಿಶನರಿಗಳ ಮತಾಂತರದ ಪಿಡುಗು ಜಾರ್ಖಂಡಿನ ವನವಾಸಿ ಬುಡಕಟ್ಟು ಸಮುದಾಯನ್ನು ಬಹಳವಾಗಿ ಕಾಡುತ್ತಿದೆ. ಈ ಮಸೂದೆ ಸದನದಲ್ಲಿ ಒಪ್ಪಿಗೆಯಾದ ಪಕ್ಷದಲ್ಲಿ ಜಾರ್ಖಂಡ್ ಮತಾಂತರ ನಿಷೇಧ ಕಾನೂನು ಜಾರಿಗೊಳಿಸಿದ ಆರನೇ ರಾಜ್ಯವಾಗಲಿದೆ. ಮಧ್ಯಪ್ರದೇಶ, ಛತ್ತೀಸ್‌ಗಢ, ಗುಜರಾತ್, ಹಿಮಾಚಲ ಪ್ರದೇಶ ಮತ್ತು ಒಡಿಶಾ ರಾಜ್ಯಗಳಲ್ಲಿ ಈಗಾಗಲೇ ಮತಾಂತರ ನಿಷೇಧ ಕಾಯಿದೆ ಜಾರಿಯಲ್ಲಿದೆ.

# ಕೇರಳದಲ್ಲಿ ಕಮ್ಯುನಿಸ್ಟ್ ಗೂಂಡಾಗಳಿಂದ ಮುಂದುವರಿದ ಆರೆಸ್ಸೆಸ್ ಸ್ವಯಂಸೇವಕರ ಹತ್ಯೆ



ಕೇರಳದಲ್ಲಿ ಆರೆಸ್ಸೆಸ್ ಕಾರ್ಯಕರ್ತರ ಹತ್ಯೆ ಎಗ್ಗಿಲ್ಲದೆ ನಡೆಯುತ್ತಿದ್ದು, ಜುಲೈ 29ರಂದು ಕೇರಳದ ರಾಜಧಾನಿ ತಿರುವನಂತಪುರಂನಲ್ಲಿ ಇನ್ನೊಬ್ಬ ಆರೆಸ್ಸೆಸ್ ಕಾರ್ಯಕರ್ತ ರಾಜೇಶ್ ಎಡವಕೊಡೆ (38 ವರ್ಷ) ಎಂಬವರನ್ನು ಸಿಪಿಎಮ್ ಗೂಂಡಾಗಳು ಹತ್ಯೆ ಮಾಡಿದ್ದಾರೆ. ಅಂದು ರಾತ್ರಿ ಮನೆಗೆ ತೆರಳುತ್ತಿದ್ದ ರಾಜೇಶ್ ಅವರನ್ನು ಅಡ್ಡಗಟ್ಟಿದ ಸಿಪಿಎಮ್ ಬೆಂಬಲಿಗರು ಅವರ ತಡೆದು ಎಡಗೈಯನ್ನು ಕತ್ತರಿಸಿ ಬರ್ಬರವಾಗಿ ಹತ್ಯೆ ಮಾಡಿದ್ದಾರೆ. ಹಲವು ವರ್ಷಗಳಿಂದ ಸಂಘದ ಚಟುವಟಿಕೆಗಳ ತೊಡಗಿಸಿಕೊಂಡ ರಾಜೇಶ್ ವಿರುದ್ಧ ಈವರೆಗೆ ಒಂದೇ ಒಂದು ಅಪರಾಧಿ ಪ್ರಕರಣವೂ ದಾಖಲಾಗಿರಲಿಲ್ಲ. ಆದರೆ ತಮ್ಮ ಪ್ರಾಬಲ್ಯ ಕುಸಿಯುತ್ತಿರುವುದರಿಂದ ಚಿಂತಾಕ್ರಾಂತರಾಗಿರುವ ಸಿಪಿಎಂ ಕಮ್ಯುನಿಸ್ಟ್ ಪಕ್ಷಗಳ ಕಾರ್ಯಕರ್ತರು ಅಮಾಯಕ ಸಂಘದ ಸ್ವಯಂಸೇವಕ ರಾಜೇಶ್‌ರನ್ನು ಹತ್ಯೆ ಮಾಡಿದ್ದಾರೆ. ಅಷ್ಟಕ್ಕೂ ಆತ ಮಾಡಿದ ತಪ್ಪೆಂದರೆ ಸಿಪಿಎಂನ ಬೇಡಿಕೆಯೊಂದನ್ನು ವಿರೋಧಿಸಿದ್ದು. ಆರೆಸ್ಸೆಸ್ ಸ್ವಯಂಸೇವಕರು ಹಾಗೂ ಅವರ ಮನೆಗಳ ಮೇಲೆ ಸ್ಥಳೀಯ ಸಿಪಿಎಂ ಗೂಂಡಾಗಳು ನಡೆಸಿದ ವಿಧ್ವಂಸಕ ಕೃತ್ಯಗಳ ವಿರುದ್ಧ ಸಂಘದ ಕಾರ್ಯಕರ್ತರು ಪೊಲೀಸ್ ದೂರು ದಾಖಲಿಸಿದ್ದರು. ತನ್ನ ಕಾರ್ಯಕರ್ತರ ವಿರುದ್ಧ ದಾಖಲಿಸಿರುವ ಕೇಸುಗಳನ್ನು ಹಿಂಪಡೆಯಬೇಕು ಎಂದು ಸಿಪಿಎಂ ಕೆಲವು ದಿನಗಳ ಹಿಂದೆ ಆಗ್ರಹಿಸಿತ್ತು. ಆದರೆ ರಾಜೇಶ್ ಇದನ್ನು ವಿರೋಧಿಸಿದ್ದರು. ಕೇಸ್ ಹಿಂಪಡೆಯಬಾರದು ಎಂದು ಹೇಳಿದ್ದೇ ಅವರು ಮಾಡಿದ ತಪ್ಪು!

ಇಷ್ಟು ವರ್ಷಗಳಲ್ಲಿ ಕೇರಳದಲ್ಲಿ 287 ಆರೆಸ್ಸೆಸ್ ಕಾರ್ಯಕರ್ತರ ಹತ್ಯೆಯಾಗಿದೆ. ಸಿಪಿಎಮ್ ಕೇರಳದಲ್ಲಿ ಅಧಿಕಾರಕ್ಕೆ ಬಂದಾಗಿನಿಂದ 2016ರ ಅಕ್ಟೋಬರ್‌ನಿಂದ 14 ಆರೆಸ್ಸೆಸ್ ಸ್ವಯಂಸೇವಕರ ಹತ್ಯೆಯಾಗಿದೆ. ಸಾಮಾಜಿಕವಾಗಿ ಹಾಗೂ ಆರ್ಥಿವಾಗಿ ಕೆಳ ಸ್ತರದಲ್ಲಿರುವ ಜನರೂ ಆರೆಸ್ಸೆಸ್‌ನ ಭಾಗವಾಗತೊಡಗಿರುವುದು ಸಿಪಿಎಂಗೆ ಸವಾಲಾಗಿ ಪರಿಣಮಿಸಿದೆ. ಯಾರೂ ಆರ್‌ಎಸ್‌ಎಸ್ ಸೇರಬಾರದು ಎಂಬ ಕಾರಣಕ್ಕೆ ಈ ರೀತಿ ಮಾಡಿ ಭಯ ಹುಟ್ಟಿಸಲಾಗುತ್ತಿದೆ. ಇದಕ್ಕೆ ಇನ್ನೂ ಮಹತ್ತ್ವದ ಕಾರಣವೆಂದರೆ ಸಿಪಿಎಮ್‌ನ ಬೆಂಬಲಿಗರಲ್ಲಿ ಶೇ. 98ರಷ್ಟು ಹಿಂದೂಗಳೇ ಆಗಿದ್ದಾರೆ. ಸಿಪಿಎಂ ಪಕ್ಷವನ್ನು ಮುಸಲ್ಮಾನರು ಮತ್ತು ಕ್ರೈಸ್ತರು ಬೆಂಬಲಿಸುವುದಿಲ್ಲ. ಹೀಗಾಗಿ ಆರೆಸ್ಸೆಸ್‌ನಿಂದ ತನ್ನ ಹಿಂದೂ ಸಮುದಾಯದ ಬೆಂಬಲ ಕಳೆದುಕೊಳ್ಳುತ್ತೇವೆ ಎಂಬ ಭಯ ಸಿಪಿಎಂಗೆ ಕಾಡುತ್ತಿದೆ. ದೇಶದೆಲ್ಲೆಡೆ ಸಿಪಿಎಮ್ ತನ್ನ ಅರಾಷ್ಟ್ರೀಯ, ಅರಾಜಕೀಯ ಸಿದ್ಧಾಂತಗಳಿಂದಾಗಿ ಜನರ ವಿಶ್ವಾಸವನ್ನು ಸಂಪೂರ್ಣವಾಗಿ ಕಳೆದುಕೊಳ್ಳುತ್ತಿರುವ ಈ ಸಂದರ್ಭದಲ್ಲಿ ಕೊನೆಯದಾಗಿ ಉಳಿದಿರುವ ಕೇರಳದಲ್ಲಿಯೂ ಹಿಂದುಗಳು ಆರೆಸ್ಸೆಸ್‌ನೆಡೆಗೆ ಹರಿದು ಬರುತ್ತಿರುವುದು ಸಿಪಿಎಂನ ನಿದ್ದೆಗೆಡಿಸಿದೆ. ಕಣ್ಣೂರು, ಈವರೆಗೆ ಸಿಪಿಎಮ್ ಗೂಂಡಾಗಳ ಕೇಂದ್ರ ಸ್ಥಾನವಾಗಿತ್ತು. ಇದೀಗ ತಿರುವನಂತಪುರವೂ ಇನ್ನೊಂದು ಕೇಂದ್ರವಾಗಿ ಬದಲಾಗುತ್ತಿದೆ. ಇದಕ್ಕೆ ಪ್ರಮುಖ ಕಾರಣ, ಕಣ್ಣೂರಿನ ಕೆಲ ಗೂಂಡಾಗಳಿಗೆ ಕಣ್ಣೂರು ಪ್ರವೇಶವನ್ನು ಇರ್ಬಂಧಿಸಲಾಗಿದೆ. ಈವರೆಲ್ಲರೂ ತಿರುವನಂತಪುರದಲ್ಲಿ ಬಂದು ನೆಲೆಸಿದ್ದಾರೆ. ಹೀಗಾಗಿ ಇದೀಗ ತಿರುವನಂತಪುರಂ ಕೂಡಾ ಸಿಪಿಎಮ್ ಗೂಂಡಾಗಳ ತಾಣವಾಗಿ ಬದಲಾಗಿದೆ. ಕೇವಲ ಸೈದ್ಧಾಂತಿಕ ವಿರೋಧ ಮತ್ತು ರಾಜಕೀಯ ಕಾರಣಗಳಿಗಾಗಿ ಇದುವರೆಗೆ ಕೇರಳದಲ್ಲಿ 287 ಆರೆಸ್ಸೆಸ್ ಕಾರ್ಯಕರ್ತರು ಕಮ್ಯುನಿಸ್ಟ್ ಮತ್ತಿತರ ವಿರೋಧಿಗಳಿಂದ ಪ್ರಾಣ ಕಳೆದುಕೊಂಡಿದ್ದು ಅನೇಕರು ಅಂಗಾಂಗಗಳನ್ನು ಕಳೆದುಕೊಂಡಿದ್ದಾರೆ, ಅಪಾರ ಪ್ರಮಾಣದ ಆಸ್ತಿಪಾಸ್ತಿ ಮನೆಗಳ ನಷ್ಟವನ್ನೂ ಅನುಭವಿಸಿದ್ದಾರೆ.

**ಓದುಗರೇ ಗಮನಿಸಿ**
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು-560 004. ಮೊಬೈಲ್: 97391 83021

ಸಂಪಾದಕ-ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು-04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು-19.